ರುಚಿಕರವಾದ ಉಪಹಾರ
ಸಿಹಿ – ಖಾರ ತಿಂಡಿಗಳು
ನ್ಯೂ ಕೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ

ವಾರಪತ್ರಿಕೆ

ಸ್ಥಾಪನೆ : 1948
SJ 6 ದಶಕಗಳ
ವಿಶ್ವಾಸನೀಯ ಸೇವೆಯಲ್ಲಿ
ಶೇಟ್ ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 27 ॥ ಸಂಚಿಕೆ : 42 ॥ Udp/1263/2015-17 ॥ R.NO.50495/91 ॥ ತಾರೀಕು : 07–11–2017 ॥ ರೂ 5/– ॥ ವಾರ್ಷಿಕ ಚಂದಾ : 300/– ಅಂಚೆಯಲ್ಲಿ : 400/

## ಎನ್.ವಿನಯ ಹೆಗ್ಡೆ ಅವರಿಗೆ ಯಡ್ತರೆ ಮಂಜಯ್ಯ ಶೆಟ್ಟಿ ಸ್ಮಾರಕ ಪ್ರಶಸ್ತಿ ಪ್ರದಾನ



ಕೀರ್ತಿಶೇಷ ಶ್ರೀ ಯಡ್ತರೆ ಮಂಜಯ್ಯ ಶೆಟ್ಟಿ ಸ್ಮಾರಕ ಟ್ರಸ್ಟ್ ಕುಂದಾಪುರ ವತಿಯಿಂದ ರವಿವಾರ ಕುಂದಾಪುರದ ಬಂಟರ ಯಾನೆ ನಾಡವರ ಸಂಕೀರ್ಣದ ಆರ್.ಎನ್.ಶೆಟ್ಟಿ ಕಲ್ಯಾಣ ಭವನದಲ್ಲಿ ನಡೆದ ಯಡ್ತರೆ ಮಂಜಯ್ಯ ಶೆಟ್ಟಿ ಅವರ 104ನೇ ಜನ್ಮ ಜಯಂತಿ ಉತ್ಸವ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ನಿಟ್ಟೆ ವಿಶ್ವವಿದ್ಯಾಲಯದ ಕುಲಪತಿ ಎನ್.ವಿನಯ ಹೆಗ್ಡೆ ಅವರಿಗೆ ಯಡ್ತರೆ ಮಂಜಯ್ಯ ಶೆಟ್ಟಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಸಮಾರಂಭವನ್ನು ರಾಜ್ಯಸಭಾ ಸದಸ್ಯ ಆಸ್ಕರ್ ಫೆರ್ನಾಂಡೀಸ್ ಉದ್ಘಾಟಿಸಿದರು. ಯಡ್ತರೆಮಂಜಯ್ಯ ಶೆಟ್ಟಿ ಸ್ಮಾರಕ ಟ್ರಸ್ಟ್‌ನ ಅಧ್ಯಕ್ಷ ಬಿ. ಜಗನ್ನಾಥ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಪ್ರಶಸ್ತಿ ಸ್ವೀಕರಿಸಿದ ವಿನಯ ಹೆಗ್ಡೆ ಮಾತನಾಡಿ " , ಮಂಜಯ್ಯ ಶೆಟ್ಟಿ ಅವರು ಸಮಾಜದ ಶ್ರೇಯೋಭಿವೃದ್ಧಿಗಾಗಿ ಅಪಾರ ಕೊಡುಗೆ ನೀಡಿದವರು. ಸ್ಥಾನಮಾನಕ್ಕಿಂತ ಸಮಾಜದ ಏಳಿಗೆಗೆ ಮೊದಲ ಆದ್ಯತೆ ನೀಡುತ್ತಿದ್ದ ಅವರ ಆದರ್ಶವೇ ನನಗೆ ಪ್ರೇರಣೆ" ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಪ್ರಮೋದ್ ಮಧ್ವರಾಜ್, ವೈದ್ಯಕೀಯ ನೆರವು ವಿತರಿಸಿದರು.

ಮುಖ್ಯಅತಿಥಿಗಳಾಗಿ ಮಾಜಿ ಸಚಿವ ಎಂ. ಅಮರನಾಥ್ ಶೆಟ್ಟಿ, ಬೈಂದೂರು ಶಾಸಕ ಗೋಪಾಲ ಪೂಜಾರಿ, ವಿಧಾನ ಪರಿಷತ್ ಸದಸ್ಯರಾದ ಪ್ರತಾಪ್‌ಚಂದ್ರ ಶೆಟ್ಟಿ ಕೋಟ ಶ್ರೀನಿವಾಸ ಪೂಜಾರಿ, ಮಾಜಿ ಶಾಸಕ ಎ.ಜಿ.ಕೊಡ್ಗಿ, ಕೊಲ್ಲೂರು ಮೂಕಾಂಬಿಕಾ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಯು.ಹರೀಶ ಎಂ.ಶೆಟ್ಟಿ, ಪುರಸಭಾ ಅಧ್ಯಕ್ಷೆ ಶ್ರೀಮತಿ ವಸಂತಿ ಸಾರಂಗ ಶುಭಹಾರೈಸಿದರು.

ಬ್ಲೋಸಂ ಫೆರ್ನಾಂಡೀಸ್, ಪ್ರೊ.ಎಂ.ಸುಬ್ಬಣ್ಣ ಶೆಟ್ಟಿ, ಡಾ| ವೈ.ಎಸ್.ಹೆಗ್ಡೆ, ಯು.ಟಿ. ಆಳ್ವ, ಯು.ಸೀತಾರಾಮ ಶೆಟ್ಟಿ ಉಪಸ್ಥಿತರಿದ್ದರು.

ಟ್ರಸ್ಟ್‌ನ ಸಂಚಾಲಕ , ಮಾಜಿ ಶಾಸಕ ಬಿ.ಅಪ್ಪಣ್ಣ ಹೆಗ್ಡೆ ಸ್ವಾಗತಿಸಿದರು. ಕೊ.ಶಿವಾನಂದ ಕಾರಂತ ಪ್ರಸ್ತಾಪಿಸಿ ಅಭಿನಂದನಾ ಪತ್ರ ವಾಚಿಸಿದರು. ಯು.ಎಸ್.ಶೆಣೈ, ದಿನಕರ ಶೆಟ್ಟಿ ಕಂದಾವರ ಕಾರ್ಯಕ್ರಮ ನಿರ್ವಹಿಸಿದರು. ಕೆ.ದಿನಕರ ಶೆಟ್ಟಿ ವಂದಿಸಿದರು. ವೈ.ಗೌತಮ್ ಹೆಗ್ಡೆ, ಸದಾಶಿವ ಶೆಟ್ಟಿ ಅತಿಥಿಗಳನ್ನು ಗೌರವಿಸಿದರು. ಶ್ರೀಮತಿ ವಿನಯ ವಿ.ಶೆಣೈ ಪ್ರಾರ್ಥಿಸಿದರು.

ಚಿಕ್ಕಮ್ಮ ಶೆಡ್ತಿ, ಕೆ.ಪುಷ್ಪ, ಕೆ.ಕಮಲ, ಸುಬ್ಬಣ್ಣ ಶೆಟ್ಟಿ, ಮಂಜುನಾಥ ರಿಗೆ ವೈದ್ಯಕೀಯ ನೆರವು ನೀಡಲಾಯಿತು.

ಹಿರಿಯ ಉದ್ಯಮಿ ಆರ್.ಎನ್.ಶೆಟ್ಟಿಯವರ ಪರವಾಗಿ ಆನಂದ ಶೆಟ್ಟಿಯವರು ರೂ 15 ಲಕ್ಷ ರೂ ಚೆಕ್‌ನ್ನು ಯಡ್ತರೆ ಮಂಜಯ್ಯ ಶೆಟ್ಟಿ ಟ್ರಸ್ಟ್ ಅಧ್ಯಕ್ಷ ಬಿ.ಜಗನ್ನಾಥ ಶೆಟ್ಟಿಯವರಿಗೆ ಹಸ್ತಾಂತರಿದರು. ಯಡ್ತರೆ ಮಂಜಯ್ಯ ಶೆಟ್ಟಿ ಕಟ್ಟಡ ಸಂಕೀರ್ಣಕ್ಕಾಗಿ ಈ ಹಿಂದೆ 25 ಲಕ್ಷ ರೂ ನೀಡಿದ್ದ ಆರ್.ಎನ್.ಶೆಟ್ಟಿಯವರು ಒಟ್ಟಾರೆ 40 ಲಕ್ಷ ರೂ ನೀಡಿದಂತಾಗಿದೆ.

ಹಿರಿಯ ಇಂಜಿನಿಯರ್ ಪ್ರೊ.ಎಂ.ಸುಬ್ಬಣ್ಣ ಶೆಟ್ಟಿಯವರು ಕಾಂಕ್ರಿಟ್ ಟೆಕ್ನಾಲಜಿಯಲ್ಲಿ ಮಾಡಿದ ಸಾಧನೆಗಾಗಿ ಅವರನ್ನು ಅಭಿನಂದಿಸಲಾಯಿತು.

## ಶ್ರೀ ಸಂಯಮೀಂದ್ರ ತೀರ್ಥರು ಕುಂದಾಪುರಕ್ಕೆ



ಶ್ರೀ ಸಂಸ್ಥಾನ ಕಾಶೀ ಮಠಾಧೀಶ ಶ್ರೀಮದ್ ಸಂಯಮೀಂದ್ರ ತೀರ್ಥ ಸ್ವಾಮೀಜಿಯವರು ನ.12 ರವಿವಾರ ಕೊಂಚಾಡಿಯಿಂದ ಕುಂದಾಪುರ ಪೇಟೆ ಶ್ರೀ ವೆಂಕಟರಮಣ ದೇವಸ್ಥಾನಕ್ಕೆ ಚಿತ್ತೈಸಿ ಮೊಕ್ಕಾಂ ಮಾಡಲಿರುವರು. ಅಂದು ರಾತ್ರಿ ಗಂಟೆ 8 ಕ್ಕೆ ಶ್ರೀ ಶ್ರೀಗಳವರನ್ನು ಬೋರ್ಡ್ ಹೈಸ್ಕೂಲ್ ಮುಂಭಾಗದಲ್ಲಿ ಸ್ವಾಗತಿಸಿ ಪುರಮೆರವಣಿಗೆಯಲ್ಲಿ ದೇವಸ್ಥಾನಕ್ಕೆ ಬರಮಾಡಿಕೊಳ್ಳಲಾಗುವುದು. ತಾ.13ರಂದು ಬೆಳಿಗ್ಗೆ ಗಂಟೆ 8ಕ್ಕೆ ಕುಂದಾಪುರ ಬೋರ್ಡ್ ಹೈಸ್ಕೂಲ್‌ನ ಹಳೆ ವಿದ್ಯಾರ್ಥಿ , ನಿವೃತ್ತ ಬ್ಯಾಂಕ್ ಅಧಿಕಾರಿ, ಬೆಂಗಳೂರು ನಿವಾಸಿ ತ್ರಾಸಿ ತಾರಾನಾಥ ಶೆಣೈ ಅವರು ವೆಂಕಟರಮಣ ದೇವರ ಗರ್ಭಗುಡಿಗೆ ನಿರ್ಮಿಸಿಕೊಟ್ಟ ರಜತದ್ವಾರವನ್ನು ಶ್ರೀಶ್ರೀಗಳವರು ಶ್ರೀ ದೇವರಿಗೆ ಸಮರ್ಪಿಸಲಿದ್ದಾರೆ. ತಾ.14 ರಂದು ಬೆಳಿಗ್ಗೆ ಗಂಟೆ 10 ಕ್ಕೆ ಮುದ್ರಾಧಾರಣೆ ಜರುಗಲಿದೆ. ತಾ.15ರಂದು ಸಾಯಂಕಾಲ ಗಂಟೆ 7ಕ್ಕೆ ಶ್ರೀ ಶ್ರೀಗಳವರು ಕುಂದಾಪುರದಿಂದ ಭದ್ರಗಿರಿಗೆ ಪ್ರಯಾಣ ಬೆಳೆಸಲಿರುವರು ಎಂಬುದಾಗಿ ದೇವಳದ ಪ್ರಕಟಣೆ ತಿಳಿಸಿದೆ.

## ನ.17 ಕುಂದೇಶ್ವರ ದೀಪೋತ್ಸವ

ಶ್ರೀ ಕುಂದೇಶ್ವರ ದೇವಸ್ಥಾನದ ಲಕ್ಷ ದೀಪೋತ್ಸವ ದಿನಾಂಕ 17 ರಂದು ನಡೆಯಲಿದೆ. ದಿನಾಂಕ 16 ರಿಂದ ಧಾರ್ಮಿಕ ಕಾರ್ಯಕ್ರಮಗಳು ಆರಂಭಗೊಳ್ಳಲಿದ್ದು ಈಗಾಗಲೇ ಲಕ್ಷ ದೀಪೋತ್ಸವಕ್ಕಾಗಿ ಸಿದ್ಧತೆ ಆರಂಭಗೊಂಡಿದೆ. ದಿನಾಂಕ 17 ರಂದು ಶುಕ್ರವಾರ ಪೂರ್ವಾಹ್ನ 9 ರಿಂದ ದೇವರ ಸನ್ನಿಧಿಯಲ್ಲಿ ಶತರುದ್ರಾಭಿಷೇಕ , ಮಹಾಪೂಜೆ ಅನ್ನಸಂತರ್ಪಣೆ ನಡೆಯಲಿದ್ದು ಸಂಜೆ 5 ರಿಂದ ದೇವರ ನಾಮ ಸಂಕೀರ್ತನೆ ಸಂಜೆ 6 ರಿಂದ ನೃತ್ಯ ಸಿಂಚನ ಸಾಂಸ್ಕೃತಿಕ ಕಾರ್ಯಕ್ರಮ ಸಂಜೆ 6.30ರಿಂದ ರಂಗಪೂಜೆ ಮಹಾಮಂಗಳಾರತಿ, ಲಕ್ಷ ದೀಪೋತ್ಸವ ನಡೆಯಲಿದೆ. ರಾತ್ರಿ 7.30ಕ್ಕೆ ಶ್ರೀ ದೇವರ ಪುರಮೆರವಣಿಗೆ ಆರಂಭವಾಗಲಿದೆ ಎಂದು ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಎಸ್.ಕೃಷ್ಣಾನಂದ ಚಾತ್ರ ಹಾಗೂ ಆಡಳಿತ ಮಂಡಳಿ ಸದಸ್ಯರು ತಿಳಿಸಿದ್ದಾರೆ.

## ಮೂಕಾಂಬಿಕೆಯ ಭಕ್ತ ಡಾ| ಪುನಥಿಲ್ ಕುಂಞಬ್ದುಲ್ಲ





ಕುಂದಾಪುರದ ಸಮಾರಂಭದಲ್ಲಿ ಜೇಸುದಾಸ್ ಹಾಗೂ ಶ್ರೀಶನ್‌ರೊಂದಿಗೆ



ಭಾರತದ ಶ್ರೇಷ್ಠ ಸಾಹಿತಿ, ವೈದ್ಯ, ವಾಗ್ಮಿ ಚಲನಚಿತ್ರ ವಿಮರ್ಶಕ, ಚಿತ್ರನಟ ಪುನಥಿಲ್ ಕುಂಞಬ್ದುಲ್ಲ ಕಲ್ಲಿಕೋಟೆಯ ತಮ್ಮ ನಿವಾಸದಲ್ಲಿ 27–10–2017ರಂದು ಕಣ್ಮುಚ್ಚಿದಾಗ ಅಪಾರ ಸಂಖ್ಯೆಯ ರಾಜಕೀಯ ನಾಯಕರು, ಸಾಹಿತಿಗಳು, ಸಮಾಜದ ಗಣ್ಯರು, ಚಿತ್ರರಂಗದ ಪ್ರಮುಖರು ಶ್ರದ್ಧಾಂಜಲಿ ಅರ್ಪಿಸಿದರು. ನಾಡಿನ ಹಿರಿಯ ಪ್ರತಿಭೆ ಮರೆಯಾಗಿ ದೇಶಕ್ಕೆ ದೊಡ್ಡ ನಷ್ಟವಾಯಿತು ಎಂದು ಕಣ್ಣೀರುಗೆರೆದರು.

1940 ಎಪ್ರಿಲ್ 3 ರಂದು ಜನಿಸಿದ ಪುನಥಿಲ್ ಕುಂಞಬ್ದುಲ್ಲ ಬಾಲ್ಯದಿಂದಲೇ ಪ್ರತಿಭಾವಂತ. ಕ್ಯಾಲಿಕಟ್ ಯುನಿವರ್ಸಿಟಿಯಲ್ಲಿ ವಿದ್ಯಾಭ್ಯಾಸ ಮುಗಿಸಿ, ಅಲಿಘಡ್ ವಿಶ್ವವಿದ್ಯಾಲಯದಲ್ಲಿ ವೈದ್ಯಕೀಯ ಶಿಕ್ಷಣ ಪಡೆದು, ತಿರುವನಂತಪುರಂನಲ್ಲಿ 15 ವರ್ಷ ಸೇವೆಸಲ್ಲಿಸಿದವರು. ಆನಂತರ ಸೌದಿ ಅರೆಬಿಯಾದ ದಮಾಂನಲ್ಲಿ ವೈದ್ಯಕೀಯ ವೃತ್ತಿ ಮುಂದುವರಿಸಿ ಮತ್ತೆ ಕೇರಳಕ್ಕೆ ಮರಳಿದರು.

ತನ್ನ 13ನೇ ವಯಸ್ಸಿನಲ್ಲಿಯೇ, ಮಾತ್ರಭೂಮಿಯ ಯುವ ವಿಭಾಗದಲ್ಲಿ ಕಲ್ಯಾಣ ರಾತ್ರಿ ಎಂಬ ಕಥೆ ಬರೆದು ಖ್ಯಾತರಾದ ಇವರು ನಂತರ ಅದೇ ಪತ್ರಿಕೆಯಲ್ಲಿ ಅಂಕಣಗಾರರಾಗಿ ಜನಪ್ರಿಯರಾದವರು. ಇವರ ಕಥೆ , ಕಾದಂಬರಿ, ವಿಚಾರ ಸಾಹಿತ್ಯ, ಮಲೆಯಾಳಂನಲ್ಲಿ ಬಹಳ ಪ್ರಸಿದ್ಧಿ ಪಡೆಯಿತು. ಇವರ "ಸ್ಮಾರಕ ಶಿಲಕಳ್ (ಸ್ಮಾರಕ ಶಿಲೆಗಳು)" ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ ದೊರಕಿ, ಅದು ಹಲವು ಭಾಷೆಗಳಿಗೆ ಭಾಷಾಂತರ ಗೊಂಡಿತು. ಇವರ ಕೃತಿಗಳೆಲ್ಲ ಉತ್ತಮವಾಗಿ ಓದಿಕೊಂಡು ಹೋಗುವ ಆಸಕ್ತಿ ಮೂಡಿಸುತ್ತವೆ. ಭಾರತೀಯ ಸಂಸ್ಕೃತಿಯ ಬಗ್ಗೆ ಅಪಾರ ಆಸಕ್ತಿ ಬೆಳೆಸಿಕೊಂಡ ಇವರು ಕೊಲ್ಲೂರು ಮೂಕಾಂಬಿಕಾ ದೇವಿಯ ಮಹಾಭಕ್ತ . 2 ದಶಕಗಳಿಂದ ನಿರಂತರ ಪ್ರತಿವರ್ಷ ದೇವಿಯ ದರ್ಶನಕ್ಕೆ ಆಗಮಿಸುತ್ತಿದ್ದರು.

ಕುಂದಾಪುರಕ್ಕೂ ಇವರಿಗೂ ಬಹಳ ನಂಟು, ಕೈರಳೀ ಸುಹೃದ್ವೇದಿ ಸಂಸ್ಥೆಯ ಅಧ್ಯಕ್ಷ ವಸಂತ ಬೇಕರಿಯ ಶ್ರೀಶನ್ ಸ್ನೇಹಿತರಾದ ಇವರನ್ನು ಶಿವರಾಮ ಕಾರಂತ ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು. ಪ್ರತಿ ವರ್ಷ ಕುಂದಾಪುರಕ್ಕೆ ಆಗಮಿಸಿ ಇಲ್ಲಿಯ ಸ್ನೇಹಿತರನ್ನು ಭೇಟಿ ಮಾಡುವ ಕ್ರಮ ಬೆಳೆಸಿಕೊಂಡು ಬಂದವರು. ಹತ್ತಾರು ಪ್ರಶಸ್ತಿ ಗೌರವಗಳು ಬಂದರೂ ತನ್ನ ಸರಳತೆ , ಹಾಗೂ ಜನಸ್ನೇಹಿ ಗುಣಗಳಿಂದ ಎಲ್ಲರ ಪ್ರೀತಿ ವಿಶ್ವಾಸಕ್ಕೆ ಪಾತ್ರರಾದವರು. ಮುಚ್ಚುಮರೆ ಇಲ್ಲದ ಜೀವನ ಇವರದ್ದು. ತಾನು ಮೃತಪಟ್ಟರೆ ತನ್ನನ್ನು ಭಾರತೀಯ ಸಂಪ್ರದಾಯದಂತೆ ಭೂಮಿಯ ಮೇಲೆ ಸುಡಬೇಕು ಎಂದು ಆಶಯ ವ್ಯಕ್ತಪಡಿಸಿದ್ದರು. ಪ್ರಧಾನಿ ವಾಜಿಪೇಯಿಯವರ ಅನುಯಾಯಿಯಾಗಿದ್ದ ಅವರು ಅವರಿಗಾಗಿ ಚುನಾವಣೆಯಲ್ಲೂ ಸ್ಪರ್ಧಿಸಿದ್ದರು. ಕುಂದಾಪುರದ ಕೈರಳೀ ಸುಹೃದ್ವೇದಿ ಸಂಸ್ಥೆ ಇವರ ನಿಧನಕ್ಕೆ ಸಂತಾಪ ವ್ಯಕ್ತಪಡಿಸಿದೆ.